ಉತ್ತರ ಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನ ಯಾಣ ಪ್ರವಾಸಿ ತಾಣವನ್ನು ಸಂಪರ್ಕಿಸುವ ರಸ್ತೆಗಳ ಡಾಂಬರೀಕರಣ.

471(5331) ಶ್ರೀ ಮೋಹನ್‌ಕೃಷ್ಣ ಶೆಟ್ಟಿ(ಕುಮಟ): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 21ನೇ ಶತಮಾನದಲ್ಲಿಯೂ ಕೂಡ, ಉತ್ತರಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನ ಯಾಣ ಊರಿಗೆ ಬಸ್ಸುಗಳ ಓಡಾಟಕ್ಕಾಗಿ ರಸ್ತೆಗಳು ವ್ಯವಸ್ಥೆಯಿಲ್ಲದೆ ಜನರು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ ಯಾಣ ಪ್ರವಾಸಿ ತಾಣವನ್ನು ಸಂಪರ್ಕಿಸುವ ರಸ್ತೆಯ ಡಾಂಬರೀಕರಣಕ್ಕಾಗಿ ಕ್ರಮಕೈಗೊಳ್ಳಲಾಗುವುದೆ?

3) ಹಾಗಿದ್ದಲ್ಲಿ, ರಸ್ತೆಯ ಡಾಂಬರೀಕರಣಕ್ಕಾಗಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

1. ಬಂದಿದೆ.

2. ಯಾಣವನ್ನು ಸಂಪರ್ಕಿಸುವ ಆನೇಗುಂದಿ–ಯಾಣ ಗ್ರಾಮೀಣ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಡಿ 2005–06ನೇ ಸಾಲಿನ ನಬಾರ್ಡ್ ಯೋಜನೆಯಡಿ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ. ಈ ಕಾಮಗಾರಿಗೆ ಸಚಿವ ಸಂಪುಟ ಉಪಸಮಿತಿಯ ಒಪ್ಪಿಗೆ ದೊರೆತು ನಬಾರ್ಡ್‌ನಿಂದ ಮಂಜೂರಾತಿ ದೊರೆತಲ್ಲಿ ಸದರಿ ರಸ್ತೆ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುವುದು.

3. ಈ ರಸ್ತೆಯು ಗ್ರಾಮೀಣ ರಸ್ತೆಯಾಗಿರುವುದರಿಂದ ಲೋಕೋಪಯೋಗಿ ಇಲಾಖೆಯ ಆಯವ್ಯಯದಲ್ಲಿ ಅನುದಾನ ಒದಗಿಸಿರುವುದಿಲ್ಲ. ಈ ಕಾಮಗಾರಿಯು ನಬಾರ್ಡ್ ಯೋಜನೆಯಡಿ ಮಂಜೂರಾದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಶ್ರೀ ಮೋಹನ್ ಕೃಷ್ಣಶೆಟ್ಟಿ: ಮಾನ್ಯ ಅಧ್ಯಕ್ಷರೇ,

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೇ, ಅದಕ್ಕೆ ಉತ್ತರವನ್ನು ಒದಗಿಸಿದ್ದೇನೆ. ಆದರೆ ಇದು ನನ್ನ ಇಲಾಖೆಗೆ ಬರುವುದಿಲ್ಲ. ಇದು

ಲೋಕೋಪಯೋಗಿ ಇಲಾಖೆಗೆ ಬರುವುದಿಲ್ಲ. ಜಿಲ್ಲಾ ಪಂಚಾಯಿತಿ ರಸ್ತೆ. ಆದರೂ ಸಹಾ ನಾನು ಇವತ್ತು ಈ ರಸ್ತೆಯನ್ನು ನಬಾರ್ಡ್‌ನಲ್ಲಿ ತೆಗೆದುಕೊಳ್ಳಬೇಕೆಂದು ಈಗಾಗಲೇ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಇದು ಉಪಸಮಿತಿ ಮುಂದೆ ಇದೆ. ಉಪಸಮಿತಿಯಲ್ಲಿ ಫೈನಲೈಜ್ ಆದಾಗ ಮಾಡಿಸಿಕೊಡುವುದಕ್ಕೆ ಪ್ರಯತ್ನಪಡುತ್ತೇನೆ. ಆದರೆ ಈ ರಸ್ತೆ ಜಿಲ್ಲಾಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಆ ಇಲಾಖೆಗೆ ಇದನ್ನು ವರ್ಗಾವಣೆ ಮಾಡಬೇಕಾಗಿತ್ತು. ಕಾರಣಾಂತರಗಳಿಂದ ಮಾಡಿಲ್ಲ. ನಮ್ಮ ಇಲಾಖಾಧಿಕಾರಿಗಳು ಸರಿಯಾಗಿ ತಿಳಿಸಿಲ್ಲವೆಂದು ಹೇಳುತ್ತೇನೆ.

ಶ್ರೀ ಮೋಹನ್ ಕೃಷ್ಣಶೆಟ್ಟಿ: ಮಾನ್ಯ ಅಧ್ಯಕ್ಷರೇ, ತಮ್ಮ ಇಲಾಖೆಗೆ ಬರುವುದಿಲ್ಲವೆಂದು ಸಚಿವರು ಹೇಳುತ್ತಿದ್ದಾರೆ. ಆದರೆ ಇದು ಸ್ಟೇಟ್ ಹೈವೇಗೆ ಕನೆಕ್ಟ್ ಆಗುವಂಥ ಒಂದು ರಸ್ತೆ. ಮತ್ತು ಈ ಯಾಣ ಎಂಬುದು ಪ್ರಸಿದ್ಧಿ ಕ್ಷೇತ್ರ. ಹಾಗೆಯೇ ಪ್ರವಾಸಿ ಕ್ಷೇತ್ರವೂ ಕೂಡ ಹೌದು. ಅಲ್ಲಿ ನೂರರಿಂದ ಸಾವಿರಗಟ್ಟಲೆ ಜನರು ದಿನನಿತ್ಯವೂ ಹೊರರಾಜ್ಯದಿಂದ ಈ ರಾಜ್ಯದಿಂದಲೂ ಅಲ್ಲಿಗೆ ಬರುತ್ತಿದ್ದಾರೆ. ಅವರಿಗೆ ರಸ್ತೆ ಸಂಪರ್ಕ ಇಲ್ಲದೇ ಗಾಡಿ ಎಲ್ಲಾ ಹಾಳಾಗಿ ಮಧ್ಯದಲ್ಲೇ ಅವರು ಬೀಳುತ್ತಾರೆ. ದೊಂಬರಾಟದ ಟೈಪ್ ಅವರು ಮಣ್ಣು ಬಳಿದುಕೊಂಡು ಅವರು ವೇಷ ಹಾಕಿಕೊಂಡಂತೆ ಕಾಣುತ್ತಾರೆ. ಆದ್ದರಿಂದ ನಾವು ಆರು ವರ್ಷದಿಂದಲೂ ನಬಾರ್ಡ್‌ನಿಂದಾಗಲೀ, ಪಿಡಬ್ಲ್ಯೂಡಿ ಇಲಾಖೆಯಿಂದಲಾಗಲಿ, ಸಿಆರ್‌ಎಫ್‌ನಿಂದಾಗಲೀ, ಪ್ರಧಾನ ಮಂತ್ರಿ ಸಡಕ್‌ನಲ್ಲಾಗಲೀ ಮಾಡಿ ಎಂದು ಹೇಳಿ ಒತ್ತಾಯವನ್ನು ತರುತ್ತಿದ್ದೇನೆ. ಆದರೆ ಇಷ್ಟು ಮಹತ್ವವುಳ್ಳ ರಸ್ತೆಯನ್ನು ಅವರು ಮಾಡುತ್ತಿಲ್ಲ. ಇದು ನಮಗೆ ಮರ್ಯಾದೆ ಪ್ರಶ್ನೆ. ಸ್ವಾತಂತ್ರ್ಯ ಬಂದು 58 ವರ್ಷಗಳಾಗಿದೆ. ಇನ್ನೂ ಈ ರಸ್ತೆ ಆಗುತ್ತಿಲ್ಲವೆಂದರೆ ತಾವೇ ಅದಕ್ಕೆ ಮಾನ್ಯ ಸಚಿವರಿಗೆ ಹೇಳಿ ಆ ರಸ್ತೆಯನ್ನು ಮಾಡಿಸಿಕೊಡಬೇಕೆಂದು ಹೇಳಿ ತಮ್ಮಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೇ, ಈ ರಸ್ತೆ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಇದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಆದರೂ ಸಹ ನಾನು ಈ ಸಾರಿ ನಬಾರ್ಡ್‌ನ ಉಪಸಮಿತಿಯಲ್ಲಿಟ್ಟು ಮಾಡಿಸುವುದಕ್ಕೆ ಪ್ರಯತ್ನಪಡುತ್ತೇನೆ. ಈಗಾಗಲೇ ಇದು ಸಮಿತಿಯ ಮುಂದೆ ಇದೆ. ಅದು ಫೈನಲೈಜ್ ಆಗುವ ಟೈಮ್‌ನಲ್ಲಿ

ನಬಾರ್ಡ್‌ನ ಏನು ಅಧ್ಯಕ್ಷರಿದ್ದಾರೆ, ಅವರ ಗಮನಕ್ಕೆ ತಂದು ಅದನ್ನು ಮಾಡಿಸುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಮ್ಮ ಇಬ್ಬರದೂ ಗಡಿಯಲ್ಲಿರುವ ಕ್ಷೇತ್ರ ಸಾರ್.

ಅಧ್ಯಕ್ಷರು: ಅದರ ಬಗ್ಗೆ ಹೇಳಿದ್ದಾರಲ್ಲಾ. ಮಾನ್ಯ ರಾಜೇಂದ್ರವರ್ಮ ಅವರು.

ಶೀ ಹೆಚ್.ಡಿ. ರೇವಣ್ಣ: ಇದು ಮುಖ್ಯವಾದ ರಸ್ತೆ. ಪ್ರಯತ್ನಪಡುತ್ತೇವೆಂದು ಹೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಶಿರಸಿಯಿಂದ ಹೋಗುವುದು ಪಿಡಬ್ಲ್ಯೂಡಿ ರಸ್ತೆ ಇದೆ, ತಾವು ಸಿಆರ್‌ಎಫ್‌ನಲ್ಲಿ ಅದಕ್ಕೆ ವಿಶೇಷವಾಗಿ ಅದಕ್ಕೆ ಗಮನವನ್ನು ಕೊಡುತ್ತೀರಿ ಎಂದು ಹೇಳಿದ್ದೀರಿ. ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟರೆ ಇನ್ನೂ ಹೆಚ್ಚು ಕಿಲೋಮೀಟರನ್ನು ಕವರ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಲ್ಲಿ ಎರಡೂ ಇದೆ. ನಮ್ಮದು ಅವರದು ಯಾಣ ಗಡಿಯಲ್ಲಿದೆ. ಕುಮಟ ಕ್ಷೇತ್ರ ಅಂಕೋಲಾ ಕ್ಷೇತ್ರದಲ್ಲಿ. ನನ್ನ ರಸ್ತೆ ಪಿಡಬ್ಲ್ಯೂಡಿ ರಸ್ತೆ. ಅವರು ಕೇಳುತ್ತಿರುವುದು ಜೆಡ್‌ಪಿ ರಸ್ತೆ. ನಮ್ಮ ರಸ್ತೆ ಏನಾಗಿದೆ ಎಂದರೆ ಬಹಳ ಹಿಂದೆ ಮಾಡಿದ್ದು. ಅದಕ್ಕೆ ಸ್ವಲ್ಪ ಸಿಆರ್‌ಎಫ್‌ನಲ್ಲಿ ಜಾಸ್ತಿ ಹಣವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಂಡಿದ್ದೇನೆ. ಅವರು ಸ್ವಲ್ಪ ಜಾಸ್ತಿ ಹಣವನ್ನು ಕೊಟ್ಟರೆ ರಸ್ತೆ ಪೂರ್ಣ ಮುಗಿಯುತ್ತದೆ. ಪ್ರವಾಸಿಗರಿಗೆ ಬಹಳ ಅನುಕೂಲವಾಗುತ್ತದೆ. ಅದು ಬಹಳ ಪ್ರಸಿದ್ಧವಾದ ಕ್ಷೇತ್ರ.

ಶ್ರೀ ಮೋಹನ್ ಕೃಷ್ಣಶೆಟ್ಟಿ: ಮಾನ್ಯ ಅಧ್ಯಕ್ಷರೇ, ಈ ರಸ್ತೆ ಸ್ಟೇಟ್ ಹೈವೇಗೆ ಕನೆಕ್ಟ್ ಆಗುವುದರಿಂದ ಸಿಆರ್‌ಎಫ್‌ನಲ್ಲಿ ಮಾಡುವುದಕ್ಕೆ ಆಗುತ್ತದೆ ಅಥವಾ ನಬಾರ್ಡ್‌ನಲ್ಲಿ ಆಗುತ್ತದೆ. ಸಚಿವರು ಅದರ ಬಗ್ಗೆ ಇಂಟರೆಸ್ಟ್ ತೆಗೆದುಕೊಳ್ಳಬೇಕು. ಆ ಕೆಲಸ ಆಗುತ್ತದೆ.

ಅಧ್ಯಕ್ಷರು: ಸಚಿವರು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಈ ರಸ್ತೆ ಅವಶ್ಯಕತೆ ಇದೆ, ನಾನು ಪ್ರಯತ್ನಪಡುತ್ತೇನೆಂದು ಹೇಳಿದ್ದೇನೆ. ಅದು 16 ಕಿಲೋಮೀಟರ್ ರಸ್ತೆ ಇದೆ. ಅದಕ್ಕೆ ನಾನು ಪ್ರಾಮಾಣಿಕವಾಗಿ ಪ್ರಯತ್ನಪಡುತ್ತೇನೆ.